(SRI H. M. CHANNABASAPPA)

fore, we can discuss the matter tomorrow. Till that time, it is better that the Hon. Member will not insist.

## Feasibility on the Minior and Lift Irigetion Schemes

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) :—ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ಪ್ರಾಮುಖ್ಯವಾದ ವಿಷಯದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಪತ್ರ ಬರೆದಿದೆ. ಅದೇನೆಂದರೆ, ಕರ್ನಾಟಕ ರಾಜ್ಯದ ಮೈನರ್ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟಗಳ ಎಸ್ಟಿಮೇಟ್‌ಗಳು ಮಂಜೂರು ಆಗುವ ಕಾಲಕ್ಕೆ, ಅದರ ಫೀಸಿಬಿಲಿಟಿ ಲಿಮಿಟಿ ೨೫೫೦ ರೂಪಾಯಿಗಳು ಇರಬೇಕೂ ಎಂದು ನಿಯಮವಿದೆ ಅದು ಬಹಳ ವರ್ಷಗಳಿಂದ ನಡೆದುಕೊಂಡು ಬಂದ ಒಂದು ನಿಯಮ. ಆದರೆ ಇಂದು ಏರಿರತಕ್ಕಂಥ ಬೆಲೆಗಳು, ಕೂಲಿಗಳಿಗೆ ಹೆಚ್ಚು ಸಂಬಳ ಕೊಡಬೇಕಾಗಿರುವುದು, ಮೊಸರು ಮತ್ತು ಪೈಪುಗಳ ಬೆಲೆ ಜಾಸ್ತಿಯಾಗಿರುವುದು ಮುಂತಾದವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ಒಂದು ಲಿಮಿಟ್‌ನ್ನು ಎರಡೂವರೆ ಸಾವಿರದಿಂದ ೩ ಸಾವಿರಕ್ಕೂದರೂ ಹೆಚ್ಚಿಸದೇ ಹೋದರೆ ಈಗ ಬಜೆಟಿನಲ್ಲಿ ಸೇರಿರುವ ಕಾರ್ಯಕ್ರಮಗಳೂ ಸಹ ತ್ವರಿತವಾಗಿ ಕಾರ್ಯಗತವಾಗುವುದಕ್ಕೆ ಅವಕಾಶವಾಗುವುದಿಲ್ಲ. ಆದಕಾರಣ ಇದರ ಬಗ್ಗೆ ಸರಕಾರದ ನೀತಿ ಏನಿದೆ ಎಂಬುದನ್ನು ತಮ್ಮ ಮೂಲಕ ಸರ್ಕಾರದವರನ್ನು ಕೇಳಬಯಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ :— ಇದನ್ನು ನಾವು ಅನೇಕ ಘಟ್ಟಗಳಲ್ಲಿ ಪರಿಶೀಲನೆ ಮಾಡುತ್ತಿದ್ದೇವೆ ಅಭಾವ ಪರಿಸ್ಥಿತಿ ಇರುವ ಕಡೆಗಳಲ್ಲಿ, ಅದು ಇರುವವರೆಗೆ ಈ ಲಿಮಿಟ್‌ನ್ನು ೨ ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಆಜ್ಞೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಇಂದು ಪದಾರ್ಥಗಳ ಬೆಲೆಗಳು, ಕೆಲಸಗಾರರಿಗೆ ಕೊಡುವ ಕೂಲಿ ವಗೈರೆ ಯಥೇಚ್ಚವಾಗಿ ಹೆಚ್ಚಿರುವ ಪ್ರಯುಕ್ತ ಹಿಂದೆ ಯಾವ ಒಂದು ಸೀಲಿಂಗ್ ಲಿಮಿಟ್‌ನ್ನು ಫಿಕ್ಸ್ ಮಾಡಿದ್ದೇವೋ, ಅದು ಇಂದಿನ ಪರಿಸ್ಥಿತಿಗೆ ಹೊಂದುವುದಿಲ್ಲ. ಎಂಬುದು ನಿರ್ವಿವಾದವಾದ ಅಂಶ. ಇದನ್ನು ಬಜೆಟಾವಣೆ ಮಾಡದಿದ್ದರೆ ಯೋಗ್ಯವಾದ ಪ್ರಾಜೆಕ್ಟಗಳನ್ನು ಕೈಬಿಡಬೇಕಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದನ್ನೇ ಸರ್ಕಾರದವರು ಈಗ ಪರಿಶೀಲನೆ ಮಾಡುತ್ತಿದ್ದಾರೆ. ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ: — ಅಭಾವ ಪ್ರದೇಶಗಳಲ್ಲಿ ಈ ಸೀಲಿಂಗ್ ಲಿಮಿಟ್‌ನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದರು. ಆದರೆ,.....

ಶ್ರೀ ಎಚ್. ಎಂ ಚನ್ನಬಸಪ್ಪ: — ಆ ರೀತಿ ೨ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದ್ದು ಅಭಾವವಿರುವರೆಗೆ ಮಾತ್ರ. ಆದರೆ ಈಗ ಅಭಾವದ ಪ್ರಶ್ನೆಯಿಲ್ಲ. ಒಟ್ಟಿನಲ್ಲಿ ಎಲ್ಲಾ ಬೆಲೆಗಳು ಹೆಚ್ಚಿರುವ ಪ್ರಯುಕ್ತ ಈಗಿನ ಸೀಲಿಂಗ್ ಲಿಮಿಟ್‌ನಲ್ಲಿ ಕೆಲಸ ಮಾಡುವುದು ಕಷ್ಟವಿದೆ. ಮತ್ತು ಈ ಲಿಮಿಟಿನೊಳಗೆ ಯೋಗ್ಯವಾದಪ್ರಾಜೆಕ್ಟ್ ಕೆಲಸಗಳನ್ನು ಮಂಜೂರು ಮಾಡುವುದು ಕಷ್ಟವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಜಾಸ್ತಿ ಮಾಡಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ ಪುಟ್ಟಸ್ವಾಮಯ್ಯ:—ಯಾವಾಗ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು. ಇಡೀ ಕರ್ನಾಟಕ ರಾಜ್ಯದ ಜನತೆ ಕಾತುರತೆಯಿಂದ ಇದನ್ನು ಎದುರು ನೋಡುತ್ತಿದ್ದಾರೆ. ಏಕೆಂದರೆ ಈಗ ಬಜೆಟಿನಲ್ಲಿ ಸೇರಿರುವ ಕೆಲಸಗಳು ಸಹ ಆಗುತ್ತಿಲ್ಲ. ಎಲ್ಲ ಕೆಲಸಗಳು ಸಹ ನಿಂತುಹೋಗಿವೆ.

ಶ್ರೀ ಎಚ್. ಎಂ. ಚನ್ನಬಸಪ್ಪ :— ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದಷ್ಟುಬೇಗ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆಂದು ಈಗಾಗಲೇ ಹೇಳಿದ್ದೇನೆ.